ನಮೂನೆ ಸಂ. ಐಎನ್‌ಸಿ – 26
[ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ]

ಕೇಂದ್ರ ಸರ್ಕಾರದ ಎದುರು, ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, ಬೆಂಗಳೂರು

ಉಪ ಸೆಕ್ಷನ್(4) ಸೆಕ್ಷನ್ 13ರ ಕಂಪನಿಗಳ ಕಾಯಿದೆ, 2013 ಮತ್ತು ಅನುಬಂಧ (ಎ) ಯ ಉಪ–ನಿಯಮ (5) ರ ನಿಯಮ 30 ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ವಿಷಯವಾಗಿ

ಮತ್ತು

ಫೋರ್ಟಿಶ್ಯೂರ್‌ಇಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
(CIN : U62099KA2025FTC201907)

ನೋಂದಾಯಿತ ಕಚೇರಿ:
ಡಿಬಿಎಸ್ ಹೌಸ್, ನಂ. 26, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ– 560051, ಭಾರತ................**ಅರ್ಜಿದಾರ ಕಂಪನಿ / ಅರ್ಜಿದಾರ**

ಇದರ ವಿಷಯವಾಗಿ

ಸಾರ್ವಜನಿಕರಿಗೆ ಈ **ಸೂಚನೆಯು** ಮೂಲಕ ತಿಳಿಯಪಡಿಸುವುದೇನೆಂದರೆ, ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು **"ಕರ್ನಾಟಕ ರಾಜ್ಯ"** ದಿಂದ **"ತಮಿಳುನಾಡು ರಾಜ್ಯ"** ಕ್ಕೆ ಬದಲಾಯಿಸಲು ಅನುವು ಮಾಡಿಕೊಡಲು **05ನೇ ಅಕ್ಟೋಬರ್ 2026** ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಮೆಮರಾಂಡಮ್ ಆಫ್ ಅಸೋಸಿಯೇಶನ್‌ನಂತೆ ಬದಲಾವಣೆಯ ದೃಢೀಕರಣವನ್ನು ಕೋರಿ ಕಂಪನಿ ಕಾಯ್ದೆ, 2013 ರ ಸೆಕ್ಷನ್ 13(4) ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ

ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಛೇರಿಯು ಪ್ರಸ್ತಾವಿತ ಬದಲಾವಣೆಯಿಂದ ತೊಂದರೆಯಾಗುತ್ತಿದೆ ಎಂದಾದರೆ, ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್ ನ್ನು, ಎಂಸಿಎ–21 **ಪೋರ್ಟಲ್** (**www.mca.gov.in**) ಮೂಲಕ ಸಲ್ಲಿಸಿ, ಅತ/ಅವಳು ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆ ಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ **ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, 'ಇ' ವಿಂಗ್ 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–560034, ಕರ್ನಾಟಕ** ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು (14) ದಿನಗಳ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಡಿಬಿಎಸ್ ಹೌಸ್, ನಂ. 26, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ–560051, ಭಾರತ.

ಫೋರ್ಟಿಶ್ಯೂರ್‌ಇಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಪರವಾಗಿ
ಸಹಿ/–
ಶ್ರೀನಿವಾಸನ್ ಸುಬ್ರಮಣ್ಯನ್
(ನಿರ್ದೇಶಕ)

ದಿನಾಂಕ : 05.10.2026 DIN : 00462909
ಸ್ಥಳ: ಬೆಂಗಳೂರು

ನಮೂನೆ ಸಂ. ಐಎನ್‌ಸಿ – 26
[ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ]

ಕೇಂದ್ರ ಸರ್ಕಾರದ ಎದುರು, ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, ಬೆಂಗಳೂರು

ಉಪ ಸೆಕ್ಷನ್(4) ಸೆಕ್ಷನ್ 13ರ ಕಂಪನಿಗಳ ಕಾಯಿದೆ, 2013 ಮತ್ತು ಅನುಬಂಧ (ಎ) ಯ ಉಪ–ನಿಯಮ (5) ರ ನಿಯಮ 30 ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ವಿಷಯವಾಗಿ

ಮತ್ತು

ಎಂಜಿಶಿಪ್ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್
(CIN : U62013KA2024FTC188193)

ನೋಂದಾಯಿತ ಕಚೇರಿ:
ನಂ. 62–1, ಹೊಸ ನಂ. 7, 1ನೇ ಕ್ರಾಸ್, ಗಂಗಾನಗರ, ಆರ್ ಟಿ ನಗರ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ–560032, ಭಾರತ
...............**ಅರ್ಜಿದಾರ ಕಂಪನಿ / ಅರ್ಜಿದಾರ**

ಇದರ ವಿಷಯವಾಗಿ

ಸಾರ್ವಜನಿಕರಿಗೆ ಈ **ಸೂಚನೆಯು** ಮೂಲಕ ತಿಳಿಯಪಡಿಸುವುದೇನೆಂದರೆ, ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು **"ಕರ್ನಾಟಕ ರಾಜ್ಯ"** ದಿಂದ **"ಹರ್ಯಾಣ ರಾಜ್ಯ"** ಕ್ಕೆ ಬದಲಾಯಿಸಲು ಅನುವು ಮಾಡಿಕೊಡಲು **02ನೇ ಸೆಪ್ಟೆಂಬರ್ 2026** ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಮೆಮರಾಂಡಮ್ ಆಫ್ ಅಸೋಸಿಯೇಶನ್‌ನಂತೆ ಬದಲಾವಣೆಯ ದೃಢೀಕರಣವನ್ನು ಕೋರಿ ಕಂಪನಿ ಕಾಯ್ದೆ, 2013 ರ ಸೆಕ್ಷನ್ 13(4) ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ

ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಛೇರಿಯು ಪ್ರಸ್ತಾವಿತ ಬದಲಾವಣೆಯಿಂದ ತೊಂದರೆಯಾಗುತ್ತಿದೆ ಎಂದಾದರೆ, ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್ ನ್ನು, ಎಂಸಿಎ–21 **ಪೋರ್ಟಲ್** (**www.mca.gov.in**) ಮೂಲಕ ಸಲ್ಲಿಸಿ, ಅತ/ಅವಳು ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆ ಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ **ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, 'ಇ' ವಿಂಗ್ 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–560034, ಕರ್ನಾಟಕ** ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು (14) ದಿನಗಳ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ.

ನಂ. 62–1, ಹೊಸ ನಂ. 7, 1ನೇ ಕ್ರಾಸ್, ಗಂಗಾನಗರ, ಆರ್ ಟಿ ನಗರ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ–560032.

ಎಚಿಜಿಶಿಪ್ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಪರವಾಗಿ
ಸಹಿ/–
ರವೀಂದರ್ ಕುಮಾರ್
(ನಿರ್ದೇಶಕ)

ದಿನಾಂಕ : 05.10.2026 ಆಐಖ : 06742224
ಸ್ಥಳ: ಬೆಂಗಳೂರು

PUBLIC NOTICE

The general public are hereby notified that, my client Smt.N.Veena W/o Mr.V.Somanna has lost the Original Sale deed executed by Smt.H.Bhagyamma W/o Late.T.Byre Gowda and others in favor of Smt.N.Veena W/o Sri.V.Somanna dated 05-10-2008 bearing document No.KRI-1-21994-2006-07, stored in C.D.No.KRID256 registered at the office of the Sub Registrar at K.R.Puram, Bangalore, has lost during the renovation of the house in this regard a Police complaint lost report No.2460325/2026 was lodged before the Bangalore City Police station on 03.10.2026. If any person/s finds the said documents kindly inform the above said stated person or address mentioned below. If any person/s misuses the said document, the same is not binding on my client and they shall do so at their own risk.

C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 9845846428, 9108784843, 080-48658774
E- Mail: rvlaw.76@gmail.com

PUBLIC NOTICE

The general public are hereby notified that, my client Smt.N.Veena W/o Mr.V.Somanna has lost the Consent deed executed by Smt.B.Radhika D/o Late. T.Byre Gowda in favor of Smt.N.Veena W/o Sri.V.Somanna dated 24-12-2008 bearing document No.BNS-1-04001-2008-09, registered at the office of the Sub Registrar at Banaswadi, Bangalore, and Sale deed executed by Smt.H.Bhagyamma W/o Late.T.Byre Gowda in favour of Smt.N.Veena W/o Mr.V.Somanna dated 05.10.2006, bearing document No.KRI-1-21997-20026-07, stored in C.D.No.KRID256 registered at the office of the Sub Registrar, K.R.Puram, Bangalore, has lost during the renovation of the house in this regard a Police complaint lost report No.2460687/2026 was lodged before the Bangalore City Police station on 03.10.2026. If any person/s finds the said documents kindly inform the above said stated person or address mentioned below. If any person/s misuses the said document, the same is not binding on my client and they shall do so at their own risk.

C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 9845846428, 9108784843, 080-48658774
E- Mail: rvlaw.76@gmail.com

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ರಘುನಂದನ್ ವಿಶ್ವನಾಥ ಭಟ್ ಅವರು, ಬೆಂಗಳೂರು ಉತ್ತರ, ಜಾಲ ಹೋಬಳಿ, ಬೆಟ್ಟಹಲಸೂರು ಗ್ರಾಮ ಪಂಚಾಯತ್, ಕುದುರೆಗೆರೆ ಗ್ರಾಮ, ದಕ್ಷ ಮಲ್ಲಿಕಾ ಲೇಔಟ್‌ನಲ್ಲಿರುವ, 121.48 ಚ. ಮೀ. (1307 ಚ. ಅಡಿ) ಅಳತೆಯ, ಆಸ್ತಿ ಸಂಖ್ಯೆ 1028/117 ರ ಸಂಪೂರ್ಣ ಮಾಲೀಕರಾಗಿದ್ದು ಮತ್ತು ಸ್ವಾಧೀನದಲ್ಲಿರುತ್ತಾರೆ. ಈ ಆಸ್ತಿಯನ್ನು ದಿನಾಂಕ 18.03.2013 ರಂದು ನೋಂದಾಯಿತ ಮಾರಾಟ ಪತ್ರ ದಾಖಲೆ ಸಂಖ್ಯೆ GAN-1-041195-2012-13 ರ ಅಡಿಯಲ್ಲಿ, ಉಪ- ನೋಂದಣಾಧಿಕಾರಿ, ಗಾಂಧಿನಗರ, ಬೆಂಗಳೂರು ಇವರ ಕಚೇರಿಯಲ್ಲಿ ನೋಂದಾಯಿಸಿ ಸ್ವಾಧೀನಪಡಿಸಿಕೊಳ್ಳಲಾಗಿದೆ ("ಸದರಿ ಆಸ್ತಿ"), ನನ್ನ ಕಕ್ಷಿದಾರರು ದಿನಾಂಕ 12.08.2025 ರಂದು, ಇ-ಸ್ಟ್ಯಾಂಪ್ ಪ್ರಮಾಣಪತ್ರ ಸಂಖ್ಯೆ IN-KA-1605293949 1209X ನೊಂದಿಗೆ, ಶ್ರೀ ರಘು ವಿ., ತಂದೆ ವೆಂಕಟರಾಯಪ್ಪ ಬಿ. ಅವರೊಂದಿಗೆ ಸದರಿ ಆಸ್ತಿಯನ್ನು 20,00,000/- ಕ್ಕೆ ಮಾರಾಟ ಮಾಡಲು ನೋಂದಾಯಿಸದ ಮಾರಾಟ ಒಪ್ಪಂದವನ್ನು ಮಾಡಿಕೊಂಡಿದ್ದರು, ಅದರ ವಿರುದ್ಧ 7,41,330/- ಪಾವತಿಸಲಾಗಿತ್ತು. ಖರೀದಿದಾರರು ಬಾಕಿ ಮೊತ್ತವನ್ನು ಪಾವತಿಸಿ, ದಿನಾಂಕ 30.10.2025 ರಂದು ಅಥವಾ ಅದಕ್ಕೂ ಮೊದಲು ಸಂಪೂರ್ಣ ಮಾರಾಟ ಪತ್ರವನ್ನು ಕಾರ್ಯಗತಗೊಳಿಸಬೇಕಾಗಿತ್ತು, ಆದರೆ ಹಾಗೆ ಮಾಡಲು ವಿಫಲರಾಗಿದ್ದಾರೆ. ಈ ಲೋಪದ ಹೊರತಾಗಿಯೂ, ನನ್ನ ಕಕ್ಷಿದಾರರು ಮತ್ತಷ್ಟು ಅವಕಾಶಗಳನ್ನು ನೀಡಿದರು. ಸಾರ್ವಜನಿಕ ರಜಾದಿನದ ಕಾರಣ ಉಪ-ನೋಂದಣಾಧಿಕಾರಿಗಳ ಕಚೇರಿ ಮುಚ್ಚಿದ್ದರಿಂದ ದಿನಾಂಕ 30.03.2026 ರಂದು ನಿಗದಿಪಡಿಸಿದ ನೋಂದಣಿ ನಡೆಯಲು ಸಾಧ್ಯವಾಗಲಿಲ್ಲ. ತದನಂತರ, ದಿನಾಂಕ 27.04.2026 ರಂದು, ನನ್ನ ಕಕ್ಷಿದಾರರು ಕಲ್ಯಾಣದಿಂದ ಬೆಂಗಳೂರಿಗೆ ಪ್ರಯಾಣಿಸಿ, ಸಂಬಂಧಪಟ್ಟ ನೋಂದಣಾಧಿಕಾರಿಗಳ ಮುಂದೆ ಸಂಜೆ ಸುಮಾರು 5.00 ಗಂಟೆಯವರೆಗೆ ಹಾಜರಿದ್ದು, ವಹಿವಾಟನ್ನು ಪೂರ್ಣಗೊಳಿಸಲು ಸಿದ್ಧರಿದ್ದರು; ಆದಾಗ್ಯೂ, ಖರೀದಿದಾರರು ಮತ್ತೆ ಬಾಕಿ ಮೊತ್ತವನ್ನು ವ್ಯವಸ್ಥೆ ಮಾಡಲು ವಿಫಲರಾದರು. ಆದ್ದರಿಂದ, ಯಾವುದೇ ಮಾರಾಟ ಪತ್ರವನ್ನು ಕಾರ್ಯಗತಗೊಳಿಸಲಾಗಿಲ್ಲ ಅಥವಾ ನೋಂದಾಯಿಸಲಾಗಿಲ್ಲ ಮತ್ತು ಯಾವುದೇ ಹಕ್ಕು, ಮಾಲೀಕತ್ವ, ಅಥವಾ ಹಿತಾಸಕ್ತಿಯನ್ನು ಖರೀದಿದಾರರಿಗೆ ವರ್ಗಾಯಿಸಲಾಗಿಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ. ಅವರ ಪುನರಾವರ್ತಿತ ಲೋಪಗಳಿಂದಾಗಿ, ನನ್ನ ಕಕ್ಷಿದಾರರು ದಿನಾಂಕ 12.08.2025 ರ ಒಪ್ಪಂದವನ್ನು ರದ್ದುಪಡಿಸಿದ್ದಾರೆ. ಖರೀದಿದಾರರು ಮತ್ತು ಅವರ ಮೂಲಕ ಹಕ್ಕು ಸಾಧಿಸುವ ವ್ಯಕ್ತಿಗಳು ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕು, ಮಾಲೀಕತ್ವ, ಹಿತಾಸಕ್ತಿ, ಶುಲ್ಕ, ಹಕ್ಕು, ಹೊಣೆಗಾರಿಕೆ ಅಥವಾ ಮೂರನೇ ವ್ಯಕ್ತಿಯ ಹಿತಾಸಕ್ತಿಯನ್ನು ಅಥವಾ ಸೃಷ್ಟಿಸುವುದರಿಂದ ಪ್ರತಿಪಾದಿಸುವುದರಿಂದ ದೂರವಿರಲು ಈ ಮೂಲಕ ಕರೆಯಲಾಗಿದೆ. ಸಾರ್ವಜನಿಕರು, ಖರೀದಿದಾರರು, ಡೆವಲಪರ್‌ಗಳು, ಬಿಲ್ಡರ್‌ಗಳು, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಬ್ರೋಕರ್‌ಗಳು ಮತ್ತು ಸಂಬಂಧಪಟ್ಟ ಎಲ್ಲರಿಗೂ ಖರೀದಿದಾರರೊಂದಿಗೆ ವ್ಯವಹರಿಸುವುದರ ಅಥವಾ ಒಪ್ಪಂದವನ್ನು ಅವಲಂಬಿಸುವುದರ ವಿರುದ್ಧ ಎಚ್ಚರಿಕೆ ನೀಡಲಾಗಿದೆ. ಅಂತಹ ಯಾವುದೇ ವ್ಯವಹಾರವು ಅವರ ಸ್ವಂತ ಅಪಾಯ, ವೆಚ್ಚ ಮತ್ತು ಪರಿಣಾಮಗಳಿಗೆ ಒಳಪಟ್ಟಿರುತ್ತದೆ. ಸದರಿ ಆಸ್ತಿ ಅಥವಾ ಒಪ್ಪಂದಕ್ಕೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಆಕ್ಷೇಪಣೆ ಹೊಂದಿರುವ ಯಾವುದೇ ವ್ಯಕ್ತಿಯು ಪ್ರಕಟಣೆಯ 15 ದಿನಗಳೊಳಗೆ ಪೋಷಕ ದಾಖಲೆಗಳೊಂದಿಗೆ ಕೆಳಗೆ ಸಹಿ ಮಾಡಿದವರಿಗೆ ತಿಳಿಸಬೇಕು, ತಪ್ಪಿದಲ್ಲಿ ಅದನ್ನು ವಿವಾದಿತವೆಂದು ಪರಿಗಣಿಸಲಾಗುತ್ತದೆ. ನನ್ನ ಕಕ್ಷಿದಾರರು ಎಲ್ಲಾ ಕಾನೂನು ಹಕ್ಕುಗಳು ಮತ್ತು ಪರಿಹಾರಗಳನ್ನು ಕಾಯ್ದಿರಿಸಿದ್ದಾರೆ.

ಸಹಿ/-
ಸುಮಿತ್ ಶ್ರೀಕಾಂತ್ ಎನ್ಮುತೆ
ವಕೀಲರು, ಬಾಂಬೆ ಹೈಕೋರ್ಟ್
ಶ್ರೀ ಗಣಪತಿ ಕೃಪಾ, ಪಂಪಾ ನಗರ, ಲೇನ್ ನಂ. 2, ಡಟೋಂಬಿವಲಿ (ಪೂರ್ವ), ಜಿಲ್ಲೆ-ಠಾಣೆ – 421201.
ಮೊ.: 8286000888

ಸುಪ್ರೀಂಕೋರ್ಟ್‌ನ ನಕಲಿ ಆದೇಶ ಸೃಷ್ಟಿಸಿ ಜೀವಾವಧಿ ಕೈದಿ ಬಿಡುಗಡೆ ಪ್ರಕರಣ

ಕೈದಿಯ ಬಿಡುಗಡೆ: ಡಿಐಜಿ ಸೋಮಶೇಖರ್ ಬಂಧನ

ಬೆಂಗಳೂರು: ಸುಪ್ರೀಂಕೋರ್ಟ್‌ನಲ್ಲಿ ನಕಲಿ ಆದೇಶ ಸೃಷ್ಟಿಸಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಕೈದಿಯನ್ನು ಬಿಡುಗಡೆ ಮಾಡಿದ ಆರೋಪ ಸಂಬಂಧ ಬಂಧಿಖಾನೆ ಡಿಐಜಿ ಸೋಮಶೇಖರ್ ರನ್ನು ಪರಪ್ಪನ ಅಗ್ರಹಾರ ಪೊಲೀಸರು ಬಂಧಿಸಿದ್ದಾರೆ.

2018ರಲ್ಲಿ ಸುಪ್ರೀಂಕೋರ್ಟ್‌ನ ನಕಲಿ ಆದೇಶ ಸೃಷ್ಟಿಸಿ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಎಸ್.ಶಂಕರ್ ಎನ್ನುವ ಕೈದಿಯನ್ನು ಬಿಡುಗಡೆ ಮಾಡಿದ್ದು, ಈ ಪ್ರಕರಣ ಸಂಬಂಧ ಇದೀಗ ಪರಪ್ಪನ ಅಗ್ರಹಾರ ಪೊಲೀಸರು, ಡಿಐಜಿ ಸೋಮಶೇಖರ್ ಅವರನ್ನು ಬಂಧಿಸಿ ತೀವ್ರ ವಿಚಾರಣೆಗೊಳಪಡಿಸಿದ್ದಾರೆ. ಅಂದಿನ ಜೈಲು ಚೀಫ್ ಸೂಪರಿಂಟೆಂಡೆಂಟ್ ಆಗಿದ್ದ ಹಾಗೂ ಸದ್ಯ ಡಿಐಜಿ ಹುದ್ದೆಯಲ್ಲಿರುವ ಸೋಮಶೇಖರ್ ಅವರ ಪಾತ್ರದ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ.

2018 ರಲ್ಲಿ ನಕಲಿ ಆದೇಶ ಸೃಷ್ಟಿಸಿ ಕೈದಿ ಬಿಡುಗಡೆ: ಕೊಲೆ ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಶಂಕರ್ ಎಂಬ ಕೈದಿಯನ್ನು ಸುಪ್ರೀಂ ಕೋರ್ಟ್‌ನ ನಕಲಿ ಆದೇಶದ ಆಧಾರದ ಮೇಲೆ 2018ರ ನವೆಂಬರ್ 13ರಂದು ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು. ಶಂಕರ್ ಬಿಡುಗಡೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ನಕಲಿ ಆದೇಶ ಸೃಷ್ಟಿಸಲಾಗಿದೆ ಎಂದು ಆರೋಪಿಸಲಾಗಿದ್ದು, ಈ ನಕಲಿ ದಾಖಲೆಯನ್ನ ಜೈಲಿನ ಎಸ್‌ಡಿಎ ಆಗಿದ್ದ ಎಸ್.ಶ್ರೀಕಾಂತ್ ಎಂಬಾತ ಸೃಷ್ಟಿಸಿದ್ದಾನೆ ಎಂಬ ಆರೋಪವಿದೆ. ನಕಲಿ ಆದೇಶದ ಆಧಾರದ ಮೇಲೆ 2018ರ ನವೆಂಬರ್ 13ರಂದು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಶಂಕರ್‌ನನ್ನು ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು. ಹೀಗಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈದಿ ಶಂಕರ್ ಹಾಗೂ ನಕಲಿ ಆದೇಶ ಸೃಷ್ಟಿಸಿದ ಆರೋಪ ಎದುರಿಸುತ್ತಿರುವ ಎಸ್.ಶ್ರೀಕಾಂತ್ ಇಬ್ಬರನ್ನೂ ಈಗಾಗಲೇ ಬಂಧನ ಮಾಡಲಾಗಿದೆ. ಇದೀಗ ಪ್ರಕರಣದಲ್ಲಿ ಅಂದಿನ ಜೈಲು ಚೀಫ್ ಸೂಪರಿಂಟೆಂಡೆಂಟ್ ಆಗಿದ್ದ ಸೋಮಶೇಖರ್ ಅವರ ಪಾತ್ರದ ಕುರಿತು ತನಿಖೆ ನಡೆಸಲಾಗುತ್ತಿದೆ.

ಶಂಕರ್ ಕಳ್ಳಾಟ ಬಯಲಾಗಿದ್ದು ಹೇಗೆ?

8 ವರ್ಷದ ಬಳಿಕ ಜೈಲು ಇಲಾಖೆಯ ಮಹಾನಿರ್ದೇಶಕರಿಗೆ (ಡಿ.ಜಿ) ಒಂದು ಪತ್ರ ಬಂದಿದೆ. ಆ ಪತ್ರದಲ್ಲಿ ಶಂಕರ್ ಎಂಬಾತ ನಕಲಿ ದಾಖಲೆ ನೀಡಿ ಜೈಲಿಂದ ಪರಾರಿಯಾಗಿದ್ದಾನೆ ಎಂದು ಬರೆಯಲಾಗಿತ್ತು, ಈ ಅರ್ಜಿಯನ್ನು ಗಂಭೀರವಾಗಿ ಪರಿಗಣಿಸಿದ ಜೈಲು ಇಲಾಖೆ ಆಂತರಿಕ ತನಿಖೆಗೆ ಆದೇಶಿಸಿದೆ. ತನಿಖೆಯ ವೇಳೆ ಸುಪ್ರೀಂಕೋರ್ಟ್‌ನಿಂದ ಯಾವುದೇ ಬಿಡುಗಡೆ ಆದೇಶ ಬಂದೇ ಇಲ್ಲ, ನಕಲಿ ಆದೇಶ ಪತ್ರ ಕೊಟ್ಟು ಶಂಕರ್ ಪರಾರಿಯಾಗಿದ್ದ.

ಅಪರಾಧಿಗೆ ಜೀವಾವಧಿ ಶಿಕ್ಷೆ ನೀಡಿದ್ದ ಕೋರ್ಟ್

2001ರಲ್ಲಿ ಕೊಲೆ, ಅಪಹರಣ–ಸುಲಿಗೆ ಪ್ರಕರಣದಲ್ಲಿ ಶಂಕರ್ ಎಂಬಾತನನ್ನು ಬಂಧಿಸಲಾಗಿತ್ತು. ಈತನ ಮೇಲೆ ಐಪಿಸಿ ಸೆಕ್ಷನ್ 364 ಎ ಮತ್ತು 120 ಬಿ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ವಿಚಾರಣೆ ನಡೆಸಿದ ಕೋರ್ಟ್ ಅಪರಾಧಿಗೆ ಜೀವಾವಧಿ ಶಿಕ್ಷೆಗೆ ನೀಡಿತ್ತು. ಎರಡೂ ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸಲು ಅಂದು ಕೋರ್ಟ್ ಆದೇಶ ಹೊರಡಿಸಿತ್ತು. ಆದರೆ, 2018ರಲ್ಲಿ ಅಪರಾಧಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಲಾಗಿದೆ. ಅದರಡಿ ಬಿಡುಗಡೆ ಆದೇಶ ನೀಡಲಾಗಿದೆ ಎಂದು ನಕಲಿ ಆದೇಶವನ್ನು ಜೈಲಾಧಿಕಾರಿಗಳಿಗೆ ನೀಡಿ ಬಿಡುಗಡೆ ಮಾಡಿಸಲಾಗಿತ್ತು.

ಜಿಮ್ ಟ್ರೈನರ್ ಸಾವು ಕೇಸ್ ನಾಲ್ವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಹೆಬ್ಬಾಳ ಕೆಂಪಾಪುರದಲ್ಲಿ ಜಿಮ್ ಟ್ರೈನರ್ ಒಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಸ್ನೇಹಿತರೇ ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಮೃತರನ್ನು 25 ವರ್ಷದ ನಂದನ್ ಎಂದು ಗುರುತಿಸಲಾಗಿದೆ. ಘಟನೆ ಸಂಬಂಧ ಅಮೃತಹಳ್ಳಿ ಪೊಲೀಸರು ನಾಲ್ವರ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶನಿವಾರ ಜಿಮ್‌ನ ಮೊದಲ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ನಡೆದಿತ್ತು. ಕಾರ್ಯಕ್ರಮಕ್ಕೆ ತೆರಳುವ ಮುನ್ನ ನಂದನ್, ತಡವಾದರೆ ಬೆಳಗ್ಗೆ ಮನೆಗೆ ಬರುವುದಾಗಿ ಕುಟುಂಬದವರಿಗೆ ತಿಳಿಸಿದ್ದರು ಎನ್ನಲಾಗಿದೆ. ವಾರ್ಷಿಕೋತ್ಸವ ಮುಗಿದ ಬಳಿಕ ಜಿಮ್‌ನ ಇತರೆ ಸಿಬ್ಬಂದಿ ಹಾಗೂ ಪರಿಚಿತರೊಂದಿಗೆ ಅವರು ಅಪಾರ್ಟ್‌ಮೆಂಟ್‌ಗೆ ತೆರಳಿದ್ದರು. ಅಲ್ಲಿ ಕೆಲವರ ನಡುವೆ ಗಲಾಟೆ ನಡೆದಿದ್ದು, ಈ ವೇಳೆ ನಂದನ್ ಮೇಲೆ ಹಲ್ಲೆ ನಡೆದಿದೆ ಎಂದು ಆರೋಪಿಸಲಾಗಿದೆ. ಹಲ್ಲೆಯ ಬಳಿಕ ನಂದನ್ ಅವರನ್ನು ಹೆಬ್ಬಾಳದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ದೇಹದ ಮೇಲೆ ಗಾಯದ ಗುರುತು ಪತ್ತೆ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನಂದನ್ ಮೃತಪಟ್ಟಿದ್ದಾರೆ. ವಿಷಯ ತಿಳಿದು ಅವರ ತಾಯಿ ಮಂಜುಳಾ ಆಸ್ಪತ್ರೆಗೆ ತೆರಳಿದ್ದು, ನಂದನ್ ದೇಹದ ಮೇಲೆ ಗಾಯದ ಗುರುತುಗಳು ಕಂಡುಬಂದಿವೆ ಎಂದು ತಿಳಿಸಿದ್ದಾರೆ. ಅಪಾರ್ಟ್‌ಮೆಂಟ್‌ನಲ್ಲಿ ನಡೆದ ಗಲಾಟೆಯ ಸಂದರ್ಭದಲ್ಲಿ ಮಾರಣಾಂತಿಕವಾಗಿ ಹಲ್ಲೆ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

ನಾಲ್ವರ ವಿರುದ್ಧ ಎಫ್‌ಐಆರ್: ಈ ಸಂಬಂಧ ನಂದನ್ ತಾಯಿ ಮಂಜುಳಾ ಅಮೃತಹಳ್ಳಿ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಆಧಾರದ ಮೇಲೆ ಪೊಲೀಸರು ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸದ್ಯ ಪ್ರಕರಣದ ತನಿಖೆ ಮುಂದುವರಿದಿದ್ದು, ನಂದನ್ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಹಲ್ಲೆಗೆ ಕಾರಣವೇನು ಮತ್ತು ಘಟನೆಯಲ್ಲಿ ನಿಖರವಾಗಿ ಏನಾಯಿತು ಎಂಬುದನ್ನು ಪೊಲೀಸರು ತನಿಖೆ ಮೂಲಕ ಪರಿಶೀಲಿಸುತ್ತಿದ್ದಾರೆ.

ಪ್ರತ್ಯೇಕ ರಸ್ತೆ ಅಪಘಾತ: ಮೂವರು ಸಾವು

ಬೆಂಗಳೂರು: ಕೆಆರ್‌ಪುರಂ, ಮಹದೇವಪುರ ಹಾಗೂ ಯಲಹಂಕ ಬಳಿ ಸಂಭವಿಸಿದ ಪ್ರತ್ಯೇಕ ಮೂರು ರಸ್ತೆ ಅಪಘಾತಗಳಲ್ಲಿ ಮೂವರು ಸಾವನ್ನಪ್ಪಿರುವ ದುರ್ಘಟನೆ ನಡೆದಿದೆ.

ಕೆಆರ್‌ಪುರಂನ ಬೂದಿಗೆರೆ ಬ್ರಿಡ್ಜ್ ಬಳಿ ಸೋಮವಾರ ಮುಂಜಾನೆ 3.50ರ ವೇಳೆ ಕಾರಿಗೆ ಬಸ್ ಡಿಕ್ಕಿ ಹೊಡೆದು ಒಬ್ಬ ಮೃತಪಟ್ಟು ಮೂವರು ಗಾಯಗೊಂಡಿದ್ದಾರೆ. ಕೆ.ಜಿ.ಹಳ್ಳಿಯ ಶಕೀರ್(58) ಮೃತಪಟ್ಟವರು. ಗಾಯಗೊಂಡಿರುವ ಅಯಾಜ್ ಪಾಷಾ, ಗುಲಾಮ್ ಖಾನ್ ಹಾಗೂ ಮೊಹಮ್ಮದ್ ಆಯುಬ್ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಂತಾಮಣಿಯಲ್ಲಿ ಉರುಸ್ ಕಾರ್ಯಕ್ರಮ ಮುಗಿಸಿಕೊಂಡು ಕೆ.ಜಿ.ಹಳ್ಳಿಗೆ ಶಕೀರ್ ಸೇರಿ ನಾಲ್ಕರು ಕಾರಿನಲ್ಲಿ ವಾಪಸ್ ಬರುತ್ತಿದ್ದ ವೇಳೆ ಮಾರ್ಗ ಮಧ್ಯದ ಬೂದಿಗೆರೆ ಬ್ರಿಡ್ಜ್ ಬಳಿ ಬಸ್ ಡಿಕ್ಕಿ ಹೊಡೆದು ಈ ದುರ್ಘಟನೆ ಸಂಭವಿಸಿದೆ.

ಬೈಕ್‌ಗೆ ಲಾರಿ ಡಿಕ್ಕಿ: ವೇಗವಾಗಿ ಬಂದ ಲಾರಿ ಹೊಡೆದು ಬೈಕ್‌ನಲ್ಲಿ ಹೋಗುತ್ತಿದ್ದ ಯುವಕನೊಬ್ಬ ಮೃತಪಟ್ಟಿರುವ ದುರ್ಘಟನೆ ಕೆ.ಆರ್.ಪುರಂ ಹ್ಯಾಂಗಿಂಗ್ ಬ್ರಿಡ್ಜ್ ಬಳಿ ನಡೆದಿದೆ. ಬೈಕ್ ಸವಾರ ತರುಣ್(17) ಮೃತಪಟ್ಟವರು, ಬೈಕ್‌ನಲ್ಲಿ ಹಿಂದೆ ಕುಳಿತಿದ್ದ ಮತ್ತೊಬ್ಬ ಯುವಕ ಗಾಯಗೊಂಡಿದ್ದು, ಆತನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಹದೇವಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾದಚಾರಿಗೆ ಕಾರು ಡಿಕ್ಕಿ: ಯಲಹಂಕ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ನಯ್ಯಾರ್ ಪೆಟ್ರೋಲ್ ಬಂಕ್ ಬಳಿ ಕಾರು ಪಾದಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ನಾಗರಾಜ್ (29) ಮೃತಪಟ್ಟಿದ್ದಾರೆ. ರಾತ್ರಿ ಸುಮಾರು 9.30ರ ವೇಳೆಗೆ ಅಪಘಾತ ಸಂಭವಿಸಿದೆ. ಮೃತ ನಾಗರಾಜ್ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಘಟನೆ ಸಂಬಂಧ ಯಲಹಂಕ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

PUBLIC NOTICE

This is to inform the general public that We, **(1) MR.CHANNEGOWDA.M.S**, S/o Mr. Seenappa, aged about 30 years, and **(2) SMT. MANGALA GOWRAMMA**, W/o Mr. Seenappa, aged about 41 years, both are R/a Tavarekere Hobli, Madapattana, Chunchanakuppe Post, Bengaluru-562130, have lost the original **(1) Registered Sale Deed dated 26/12/2012**, executed by Mr.T.G.Anjinappa, S/o Late Mr. Gangaiah, and Mr.T.A.SRIDHARA, S/o Mr.T.G.Anjinappa, in favour of Mr.T .Hanumantharayappa, S/o Late Mr.Thimmaiah, which is registered as **Document No.TVR-1-04086/2012-13** of Book-1, Stored in CD No:TVRD137, dated 26/12/2012, at the office of the Sub-Registrar, Jayanagar(Tavarekere), Bengaluru, being our erst-while Vendors' Original Sale Deed and original title deed of our immovable property being **Vacant Site No.6**, Gram Panchayath Katha No.2289/191/6, Gram Panchayath Property No:1502003017-00202627, measuring East to West 40 Feet and North to South 40 Feet, total measuring 1600 Sq.Ft, carved from converted Survey No.191, measuring 1 Acre, Conversion Order No.A.L.N(SR)14/1992-93, dated 12/03/1993, Deputy Commissioner, Bengaluru District, situated at Kurubarahalli Village, Tavarekere Gram Panchayath Limits, Tavarekere Hobli, Bengaluru South Taluk, bounded on the East by: Site No.5, West by: Road, North by: Road, South by: Others Property. Inspite of our best efforts we could not trace the same and in this regard on 02/10/2026, we had lodged online Police Complaint at Police Unit, Bengaluru South, vide Lost Report No.2459607/2026.

We have not handed over the above Original Sale Deed to any other third person nor have kept the original document in mortgage, lien, charge, of whatsoever nature. In view of the loss of the original document, this Public Notice is issued to notify all concerned parties that the above Original Sale Deed is no longer in our possession.

Any person finds the above said original document or is in possession, please handover the same to our residential address, as mentioned above, **within 07 days** from the date of publication of this public notice. After the expiry of the notice period, appropriate steps will be taken to obtain a certified/duplicate copy of the Sale Deed from the concerned Sub-Registrar's Office and no liability will be accepted for any claims arising thereafter. Contact us on: 9741338172.

ಆನೇಕಲ್: ಅನಧಿಕೃತ ಪಿಜಿಗಳ ಮೇಲೆ ದಾಳಿ

ಪರವಾನಗಿ ಇಲ್ಲದೆ ನಡೆಸಲಾಗುತ್ತಿದ್ದ ಅಕ್ರಮ ಪಿಜಿಗಳು

ಬೆಂಗಳೂರು: ಆನೇಕಲ್ ತಾಲೂಕಿನ ಬ್ಯಾಗಡದೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರಕಾರದ ನಿಯಮಗಳನ್ನು ಗಾಳಿಗೆ ತೂರಿ, ಯಾವುದೇ ಪರವಾನಗಿ ಇಲ್ಲದೆ ನಡೆಸಲಾಗುತ್ತಿದ್ದ ಅಕ್ರಮ ಪಿಜಿ ಕೇಂದ್ರಗಳು ಮತ್ತು ಅನಧಿಕೃತ ಬಹುಮಹಡಿ ಕಟ್ಟಡಗಳ ಮೇಲೆ ಪಂಚಾಯಿತಿ ಅಧಿಕಾರಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ, ಬೃಹತ್ ಅಕ್ರಮವನ್ನು ಬೆಳಕಿಗೆ ತಂದಿದ್ದಾರೆ.

ಬೆಂಗಳೂರಿನ ಹೊರವಲಯದಲ್ಲಿರುವ ಪ್ರತಿಷ್ಠಿತ ಅಲಯನ್ಸ್ ಕಾಲೇಜಿನ ಸಮೀಪದ ಈಡನ್ ಗಾರ್ಡನ್, ನಕ್ಷತ್ರ ಮತ್ತು ಸಾಯಿ ಬಡಾವಣೆಗಳಲ್ಲಿ ಕಳೆದ ಐದಾರು ವರ್ಷಗಳಿಂದ ಅಕ್ರಮವಾಗಿ 28ಕ್ಕೂ ಹೆಚ್ಚು ಪಿಜಿಗಳು ತಲೆಯೆತ್ತಿದ್ದವು. ಈ ಕಟ್ಟಡಗಳ ಮಾಲೀಕರು ಸ್ಥಳೀಯ ಗ್ರಾಮ ಪಂಚಾಯಿತಿ, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಸ್ಕಾಂ ಹಾಗೂ ಅಗ್ನಿಶಾಮಕ ದಳದಿಂದ ಯಾವುದೇ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಪಡೆದಿರಲಿಲ್ಲ. ವಸತಿ ಉದ್ದೇಶಕ್ಕೆ ಎಂದು ಅನುಮತಿ ಪಡೆದು, ವಾಣಿಜ್ಯ ಉದ್ದೇಶಕ್ಕಾಗಿ ಇವುಗಳನ್ನು ಬಳಸುತ್ತಿರುವುದು ಕಂಡುಬಂದಿದೆ. ತನಿಖೆಯ ಸಂದರ್ಭದಲ್ಲಿ ಕಂಡುಬಂದ ಆಘಾತಕಾರಿ ಅಂಶವೆಂದರೆ, ಕೇವಲ ಜಿ+2 (ನೆಲಮಹಡಿ ಮತ್ತು ಎರಡು ಅಂತಸ್ತು) ಕಟ್ಟಡಗಳಿಗೆ ಅನುಮತಿ ಪಡೆದಿದ್ದ ಮಾಲೀಕರು, ಕಾನೂನು ಬಾಹಿರವಾಗಿ 7ರಿಂದ 8 ಅಂತಸ್ತುಗಳ ಬೃಹತ್ ಕಟ್ಟಡಗಳನ್ನು ನಿರ್ಮಿಸಿದ್ದರು. ಈ ಕಟ್ಟಡಗಳು ಯಾವುದೇ ರೀತಿಯ ಭದ್ರತಾ ಮಾನದಂಡಗಳನ್ನು ಪಾಲಿಸುತ್ತಿರಲಿಲ್ಲ. ನಿರ್ಮಾಣ ಹಂತದಲ್ಲಿರುವ 18 ಅನಧಿಕೃತ ಕಟ್ಟಡಗಳನ್ನು ಅಧಿಕಾರಿಗಳು ತಕ್ಷಣವೇ ಬೀಗ ಹಾಕಿದ್ದಾರೆ.

ವಿದ್ಯಾರ್ಥಿಗಳ ಸುರಕ್ಷತೆಗೆ ಕುತ್ತು: ಪಿಜಿಗಳಲ್ಲಿ ಕನಿಷ್ಠ ಭದ್ರತಾ ವ್ಯವಸ್ಥೆಗಳಿಲ್ಲ, ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆ ಇಲ್ಲದೆ ಇರುವುದು ಮತ್ತು ಅಗ್ನಿಶಾಮಕ ಉಪಕರಣಗಳ ಕೊರತೆಯಿಂದಾಗಿ ನೂರಾರು ವಿದ್ಯಾರ್ಥಿಗಳು ಮತ್ತು ಯುವತಿಯರ ಸುರಕ್ಷತೆ ಪ್ರಶ್ನಾರ್ಹವಾಗಿತ್ತು. ಯಾವುದೇ ಅಹಿತಕರ ಘಟನೆಗಳು ನಡೆದರೆ ಹೊಣೆ ಯಾರು ಎಂಬ ಪ್ರಶ್ನೆ ಎದ್ದಿತ್ತು. ಬ್ಯಾಗಡದೇನಹಳ್ಳಿ ಪಿಡಿಒ ನಾಗರಾಜ್ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯು ಅಕ್ರಮದಾರರಿಗೆ ಬಿಸಿ ಮುಟ್ಟಿಸಿ, 12 ಅಕ್ರಮ ಪಿಜಿಗಳಿಗೆ ನೋಟಿಸ್ ಜಾರಿಗೊಳಿಸಿದೆ.

ಕೊಲೆ ಪ್ರಕರಣಗಳಲ್ಲಿ ತಾಂತ್ರಿಕ ಕಾರಣ ನೀಡಿ

ಜಾಮೀನು ಮಂಜೂರು ಸಲ್ಲ

ಬೆಂಗಳೂರು: ಕೊಲೆಯಂತಹ ಗಂಭೀರ ಸ್ವರೂಪದ ಕ್ರಿಮಿನಲ್ ಪ್ರಕರಣಗಳಲ್ಲಿ ತಾಂತ್ರಿಕ ಲೋಪಗಳ ಕಾರಣ ನೀಡಿ ಜಾಮೀನು ಮಂಜೂರು ಮಾಡುವುದು ಸರಿಯಲ್ಲ ಎಂದು ಅಭಿಪ್ರಾಯ ಪಟ್ಟಿರುವ ಹೈಕೋರ್ಟ್, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಹನ್ನಿಕೇರಿ ಗ್ರಾಮದಲ್ಲಿ ನಡೆದಿದ್ದ ಕೊಲೆ ಪ್ರಕರಣದ ಪ್ರಮುಖ ಆರೋಪಿಗಳಿಗೆ ಬೆಳಗಾವಿಯ ವಿಚಾರಣಾ ನ್ಯಾಯಾಲಯ ಮಂಜೂರು ಮಾಡಿದ್ದ ಜಾಮೀನನ್ನು ರದ್ದುಪಡಿಸಿ ಆದೇಶಿಸಿದೆ.

ಬೆಳಗಾವಿಯ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಮಂಜೂರು ಮಾಡಿದ್ದ ಜಾಮೀನು ರದ್ದು ಕೋರಿ ಘಟನೆಯಲ್ಲಿ ಮೃತರಾಗಿದ್ದ ವ್ಯಕ್ತಿಯ ಸಹೋದರ ಶಂಕರಗೌಡ ಬಸನಗೌಡ ಪಾಟೀಲ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವೆಂಕಟೇಶ್ ನಾಯಕ್ ಅವರಿದ್ದ ಧಾರವಾಡ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೇ ಪ್ರಕರಣದಲ್ಲಿ ಜಾಮೀನು ಪಡೆದಿದ್ದ ಆರೋಪಿಗಳಾದ ದ್ಯಾಮಪ್ಪ ಅಲಿಯಾಸ್ ಮುಡಕಪ್ಪ, ಮಂಜುನಾಥ್ ಹಾಗೂ ರುದ್ರಪ್ಪ ಎಂಬುವರು ಅ. 12ರ ಒಳಗಾಗಿ ವಿಚಾರಣಾ ನ್ಯಾಯಾಲಯಕ್ಕೆ ಶರಣಾಗುವಂತೆ ನಿರ್ದೇಶಿಸಿದೆ.

ಪ್ರಕರಣ ಸಂಬಂಧದ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ತನಿಖಾಧಿಕಾರಿಗಳು ಮತ್ತು ಪ್ರಾಸಿಕ್ಯೂಷನ್ ಸಲ್ಲಿಸಿರುವ ದಾಖಲೆಗಳ ಪ್ರಕಾರ ಆರೋಪಿಗಳಿಗೆ ಬಂಧನದ ಕಾರಣಗಳನ್ನು ಲಿಖಿತವಾಗಿ ನೀಡಲಾಗಿದೆ. ಮ್ಯಾಜಿಸ್ಟ್ರೇಟ್ ಎದುರು ತಮಗೆ ಬಂಧನದ ಕಾರಣ ತಿಳಿದಿದೆ ಎಂದು ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಸಂವಿಧಾನದ 22(1) ವಿಧಿಯ ಉಲ್ಲಂಘನೆಯಾಗಿದೆ ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಕೊಲೆಯಂತಹ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳಲ್ಲಿ ತಾಂತ್ರಿಕ ಲೋಪಗಳನ್ನು ನೆಪ ಮಾಡಿಕೊಂಡು ಜಾಮೀನು ನೀಡುವುದು ಸರಿಯಲ್ಲ. ವಿಚಾರಣಾ ನ್ಯಾಯಾಲಯವು ಪ್ರಕರಣದ ಗಂಭೀರತೆ, ಸಾಕ್ಷ್ಯಗಳ ಸ್ವರೂಪ ಮತ್ತು ಆರೋಪಿಗಳಿಂದ ಸಾಕ್ಷ್ಯ ನಾಶವಾಗುವ ಸಾಧ್ಯತೆ ಪರಿಗಣಿಸುವಲ್ಲಿ ವಿಫಲವಾಗಿದೆ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಅವರಿಗೆ ಮಂಜೂರಾಗಿದ್ದ ಜಾಮೀನು ರದ್ದುಪಡಿಸಿದ್ದ ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲೇಖಿಸಿರುವ ನ್ಯಾಯಪೀಠ, ಗಂಭೀರ ಸ್ವರೂಪದ ಅಪರಾಧಗಳಿಗೆ ಸಂಬಂಧಿಸಿದಂತೆ ಜಾಮೀನು ನೀಡುವ ಸಂದರ್ಭದಲ್ಲಿ ಆರೋಪದ ಗಂಭೀರತೆ, ಆರೋಪಿಯ ವಿರುದ್ಧ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ನಿರ್ಲಕ್ಷಿಸುವಂತಿಲ್ಲ ಎಂದು ಪೀಠ ಸ್ಪಷ್ಟಪಡಿಸಿದ್ದು, ಆರೋಪಿಗಳಿಗೆ ಮಂಜೂರಾಗಿದ್ದ ಜಾಮೀನನ್ನು ರದ್ದುಗೊಳಿಸಿದೆ.

ಪ್ರಕರಣದ ಹಿನ್ನೆಲೆ

2026ರ ಮಾರ್ಚ್ 30ರಂದು ರಾತ್ರಿ ಹನ್ನಿಕೇರಿ ಗ್ರಾಮದ ಸಿದ್ದೇಶ್ವರ ಜಾತ್ರಾ ಮಹೋತ್ಸವ ಮುಗಿಸಿ ಹಿಂತಿರುಗುತ್ತಿದ್ದ ಸಂಗನಗೌಡ ಎಂಬುವರ ಮೇಲೆ ಆರೋಪಿಗಳು ಕೊಡಲಿ, ಕಬ್ಬಿಣದ ರಾಡ್ ಮತ್ತು ಕಬ್ಬಣದ ಸರಪಳಿಯಿಂದ ಹಲ್ಲೆ ನಡೆಸಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಸಂಗನಗೌಡ ಅವರನ್ನು ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದರು. ಈ ಕುರಿತು ಮೃತರ ಸಹೋದರ ಶಂಕರಗೌಡ ಬಸನಗೌಡ ಪಾಟೀಲ್ ನೇಸರಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

बैंक ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡ, ಪ್ರಾದೇಶಿಕ ಕಛೇರಿ, ಬೆಂಗಳೂರು ದಕ್ಷಿಣ
4ನೇ ಮಹಡಿ, ವಿಜಯ ಟವರ್ಸ್, 41/2, ಎಂ.ಜಿ. ರಸ್ತೆ, ಬೆಂಗಳೂರು–560001,
ದೂ.ಸಂ.: 080-25011710, ಇ–ಮೇಲ್: recovery.blrsouth@bankofbaroda.com

ವಾಹನ ಇ–ಹರಾಜಿನ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ/ ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಹೈಪೋಥೆಕೇಶನ್/ಸಾಲ ಒಪ್ಪಂದದ ಅಡಿಯಲ್ಲಿ ಪಕ್ಷಗಳು ಕಾರ್ಯಗತಗೊಳಿಸಿದ ಅಧಿಕಾರಗಳನ್ನು ಬಳಸಿಕೊಂಡು ಬ್ಯಾಂಕ್ ಕೆಳಗೆ ತಿಳಿಸಲಾದ ಹೈಪೋಥೆಕೇಟೆಡ್ ಮೋಟಾರು ವಾಹನವನ್ನು ಮರು ಸ್ವಾಧೀನಪಡಿಸಿಕೊಂಡಿದೆ/ ವಶಪಡಿಸಿಕೊಂಡಿದೆ ಮತ್ತು ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು ವಾಹನವನ್ನು ಸ್ವಾಧೀನಕ್ಕೆ ಪಡೆದುಕೊಂಡಿದ್ದು, **"ಎಲ್ಲಿ ಹೇಗಿದೆಯೋ ಹಾಗೇ"** ಎಲ್ಲಿ ಏನಿದೆಯೋ ಹಾಗೇ **ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ. ಸಂ	ಶಾಖೆಯ ಹೆಸರು, ಸಾಲಗಾರರ/ಖಾತೆದಾರರ ಹೆಸರು / ಖಾತೆ ಸಂಖ್ಯೆ, ಒಟ್ಟು ಬಾಕಿಗಳು.	ಮಾದರಿ ಆರ್‌ಟಿಒ ನೋಂದಣಿ ಸಂಖ್ಯೆ & ವಾಹನ ತಯಾರಕರು	1. ಮೀಸಲು ಬೆಲೆ 2. ಅರ್ನೆಸ್ಟ್ ಮನಿ ಠೇವಣಿ (ಇಎಂಡಿ) 3. ಬಿಡ್ ಹೆಚ್ಚಳ ಮೊತ್ತ	1. ಇ–ಹರಾಜಿನ ದಿನಾಂಕ ಇ–ಹರಾಜಿನ ಸಮಯ – ಪ್ರಾರಂಭ ಸಮಯದಿಂದ ಅಂತ್ಯದ ಸಮಯ 2. ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ. 3. ವಾಹನ / ಚರಾಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1	ROSARB ಬೆಂಗಳೂರು ದಕ್ಷಿಣ ಗೋಪಿನಾಥ್ ಎಲ್ 27710600002394 ರೂ.8,59,609.55	KA-02-NB-2441 MAHINDRA XUV 300	1. ರೂ.5,40,000.00 2. ರೂ.54,000.00 3. ರೂ.5,000.00	(1) 12.11.2026 ಮಧ್ಯಾಹ್ನ 2.00 ರಿಂದ ಸಂಜೆ 6.00 (2) 12.11.2026 ಸಂಜೆ 05.59 (3) 06.11.2026 ಮತ್ತು 07.11.2026 ಬೆಳಿಗ್ಗೆ 11.00 ರಿಂದ ಸಂಜೆ 4.00 ಅಧಿಕೃತ ಅಧಿಕಾರಿಯ ಪೂರ್ವಾನುಮತಿಯೊಂದಿಗೆ
2	ROSARB ಬೆಂಗಳೂರು ದಕ್ಷಿಣ ಸಾಗರ್ 74030600000994 ರೂ.6,69,815.27	KA-05-NB-9629 MARUTI SUZUKI SWIFT VXI	1. ರೂ.4,14,000.00 2. ರೂ.14,100.00 3. ರೂ. 5,000.00	
3	ಜಯನಗರ ಪಿಯಾಲಿ ದತ್ತಾ 72710600002012 ರೂ.8,47,510.54	KA-51-MX-0642 MARUTI SUZUKI SWIFT ZXI	1. ರೂ.6,75,000.00 2. ರೂ.67,500.00 3. ರೂ.5,000.00	
4	ಮೈಸೂರು ರಸ್ತೆ ಶ್ರುತಿ ವಿ ಟಿ 89400600002255 ರೂ.7,81,057/–	KA-05-ND-9887 TATA ALTROZ	1. ರೂ.6,52,000.00 2. ರೂ.65,200.00 3. ರೂ.5,000.00	
5	ಬನ್ನೇರುಘಟ್ಟ ಮೇನ್ ಸಾಡಿಯಾ ಶಬ್ನಮ್ ಟಿ 89470600008013 ರೂ.7,09,315.33	KA-05-NK-3760 WAGON R ZXI+ AGS	1. ರೂ.5,85,000.00 2. ರೂ.58,500.00 3. ರೂ.5,000.00	
6	ಜೆಪಿ ನಗರ ಮುನಿರತ್ನಮ್ಮ 27500600014031 ರೂ.7,72,570.56	KA-05-NF-8141 HYUNDAI I20	1. ರೂ.5,67,000.00 2. ರೂ.56,700.00 3. ರೂ.5,000.00	
7	ಬಿಳೇಕಹಳ್ಳಿ ದೀಕ್ಷಿತ್ ಮಿತ್ತಲ್ ಎಂ 79200600001431 ರೂ.4,72,916.62	KA-51-MQ-9709 WAGON R VXI (O)	1. ರೂ.3,87,000.00 2. ರೂ.38,700.00 3. ರೂ.5,000.00	
8	ಸರ್ಜಾಪುರ ಸುರೇಶ್ ಜಿ 91840600000073 ರೂ.3,43,852.72	KA-03-AD-6900 HONDA AMAZE 1.5 SX MT	1. ರೂ.64,000.00 2. ರೂ.6,400.00 3. ರೂ.5,000.00	

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ವೆಬ್‌ಸೈಟ್: **https://www.bankofbaroda.bank.in** ಮತ್ತು **https://baanknet.com** ವೆಬ್‌ಸೈಟ್ ಲಿಂಕ್‌ಗಳನ್ನು ನೋಡಿ/ಭೇಟಿ ನೀಡಿ. ಬಿಡ್ಡುದಾರರ ದೂರವಾಣಿ ಸಂಖ್ಯೆ **080–25584710** ಅನ್ನು ಸಂಪರ್ಕಿಸಬಹುದು.

ದಿನಾಂಕ : **05.10.2026**
ಸ್ಥಳ : ಬೆಂಗಳೂರು

ಸಹಿ/ ಅಧಿಕೃತ ಅಧಿಕಾರಿ,
ಬ್ಯಾಂಕ್ ಆಫ್ ಬರೋಡ

happiest minds
AI FIRST. AGILE ALWAYS.

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್
ನೋಂದಾಯಿತ ಕಛೇರಿ: 53/I–4, ಹೊಸೂರು ಮುಖ್ಯ ರಸ್ತೆ, ಮಡಿವಾಳ ಬೆಂಗಳೂರು – 560 068, ಕರ್ನಾಟಕ, ಭಾರತ
ಕಂಪನಿಯ **CIN: L72900KA2011PLC057931**
ದೂರವಾಣಿ: +91 80 6196 0300, ಫ್ಯಾಕ್ಸ್: +91 80 6196 0700
ಇಮೇಲ್: investors@happiestminds.com; ವೆಬ್‌ಸೈಟ್: www.happiestminds.com

ನಮೂನೆ ಸಂ. ಐಎನ್‌ಸಿ–26

[ಕಂಪನಿಗಳ (ನಿಗಮನ) ನಿಯಮಗಳು, 2014 ರ ನಿಯಮ 30 ಪ್ರಕಾರ]
ಕಂಪನಿಯ ರಿಜಿಸ್ಟರ್ಡ್ ಆಫೀಸನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬದಲಾಯಿಸಲು ಸುದ್ದಿಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು
ಕೇಂದ್ರ ಸರ್ಕಾರ, ರೀಜನಲ್ ಡೈರೆಕ್ಟರ್, ನೈಋತ್ಯ ಪ್ರದೇಶ ಸಮಕ್ಷಮದಲ್ಲಿ
'ಇ' ವಿಂಗ್, 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು – 560034, ಕರ್ನಾಟಕ
ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 13 ಸಬ್–ಸೆಕ್ಷನ್ (4) ಮತ್ತು ಕಂಪನಿಗಳ (ನಿಗಮನ) ನಿಯಮಗಳು, 2014 ರ ನಿಯಮ 30 ಉಪ–ನಿಯಮ (5) ಭಾಗ (ಎ) ವಿಷಯದಲ್ಲಿ
ಮತ್ತು
ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್, ರಿಜಿಸ್ಟರ್ಡ್ ಆಫೀಸ್ ವಿಳಾಸ: #53/I–4, ಹೊಸೂರು ಮುಖ್ಯ ರಸ್ತೆ, ಮಡಿವಾಳ, ಬೆಂಗಳೂರು–560068, ಕರ್ನಾಟಕ, ಇದರ ವಿಷಯದಲ್ಲಿ,
...ಅರ್ಜಿದಾರ ಕಂಪನಿ

ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುತ್ತಿರುವುದೇನೆಂದರೆ: ಕಂಪನಿಯು ತನ್ನ ನೋಂದಾಯಿತ ಕಛೇರಿಯನ್ನು ಕಂಪನಿಗಳ ರಿಜಿಸ್ಟ್ರಾರ್, ಬೆಂಗಳೂರು ವ್ಯಾಪ್ತಿಗೆ ಬರುವ **"ಕರ್ನಾಟಕ ರಾಜ್ಯ"**ದಿಂದ ಕಂಪನಿಗಳ ರಿಜಿಸ್ಟ್ರಾರ್, ಕೋಲ್ಕತಾ–1 ವ್ಯಾಪ್ತಿಗೆ ಬರುವ **"ಪಶ್ಚಿಮ ಬಂಗಾಳ ರಾಜ್ಯ"**ಕ್ಕೆ ಸ್ಥಳಾಂತರಿಸಲು ಅನುವು ಮಾಡಿಕೊಡುವ ಸಲುವಾಗಿ ಶುಕ್ರವಾರ, 02ನೇ ಅಕ್ಟೋಬರ್, 2026 ರಂದು ನಡೆದ ಅಂಚೆ ಮತದಾನದ ಮೂಲಕ ಅಂಗೀಕರಿಸಲಾದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಮೆಮೊರಾಂಡಮ್ ಆಫ್ ಅಸೋಸಿಯೇಷನ್ (Memorandum of Association) ಗೆ ಮಾಡಿರುವ ಬದಲಾವಣೆಗೆ ದೃಢೀಕರಣವನ್ನು ಕೋರಿ, ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 13 ರ ಅಡಿಯಲ್ಲಿ, ಕೇಂದ್ರ ಸರ್ಕಾರಕ್ಕೆ (ಪ್ರಾದೇಶಿಕ ನಿರ್ದೇಶಕರಿಗೆ ಅಧಿಕಾರವನ್ನು ವಹಿಸಲಾಗಿದೆ) ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸಿದೆ.

ಸದರಿ ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾವಿತ ಬದಲಾವಣೆಯಿಂದ ಯಾವುದೇ ವ್ಯಕ್ತಿಯ ಹಿತಾಸಕ್ತಿಗಳಿಗೆ ಬಾಧಕವಾಗುತ್ತಿದ್ದರೆ ಅಂತಹವರು ಈ ಸೂಚನೆ ಪ್ರಕಟವಾದ 14 (ಹದಿನಾಲ್ಕು) ದಿನಗಳ ಒಳಗೆ, ತಮ್ಮ ಹಿತಾಸಕ್ತಿಯ ಸ್ವರೂಪ ಮತ್ತು ತಮ್ಮ ವಿರೋಧಕ್ಕೆ ಇರುವ ಕಾರಣಗಳನ್ನು ತಿಳಿಸುವ ಒಂದು ಅಫಿಡವಿಟ್ ಸಹಿತ **ತಮ್ಮ ಆಕ್ಷೇಪಗಳನ್ನು ಎಂಸಿಎ–21 ಪೋರ್ಟಲ್ (www.mca.gov.in) ನಲ್ಲಿರುವ ಇನ್ವೆಸ್ಟರ್ ಕಂಪ್ಲೇಂಟ್ ಫಾರಂ ಮೂಲಕ ಸಲ್ಲಿಸಬಹುದು** ಅಥವಾ ದ ರೀಜನಲ್ ಡೈರೆಕ್ಟರ್, 'ಇ' ವಿಂಗ್, 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು – 560034, ಕರ್ನಾಟಕ, ಇವರಿಗೆ ತಲುಪಿಸಬಹುದು ಅಥವಾ ತಲುಪಿಸುವ ವ್ಯವಸ್ಥೆ ಮಾಡಬಹುದು ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಬಹುದು ಮತ್ತು ಅದರ ಪ್ರತಿಯೊಂದನ್ನು ಕೆಳಗೆ ತಿಳಿಸಿರುವ ಕಂಪನಿಯ ರಿಜಿಸ್ಟರ್ಡ್ ಆಫೀಸ್ ವಿಳಾಸಕ್ಕೆ ಕಳುಹಿಸಬೇಕು:

ಕಂಪನಿಯ ರಿಜಿಸ್ಟರ್ಡ್ ಆಫೀಸ್ ವಿಳಾಸ: #53/I–4, ಹೊಸೂರು ಮುಖ್ಯ ರಸ್ತೆ, ಮಡಿವಾಳ, ಬೆಂಗಳೂರು–560068, ಕರ್ನಾಟಕ.

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
(ಸಹಿ/–)
ಪ್ರವೀಣ್ ಕುಮಾರ್ ದರ್ಶನಕರ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
ಸದಸ್ಯತ್ವ ಸಂಖ್ಯೆ: ಎಫ್6706

ಸ್ಥಳ: ಬೆಂಗಳೂರು,
ದಿನಾಂಕ: ಅಕ್ಟೋಬರ್ 05, 2026

ಬಿಜೆಪಿ ಶಾಸಕನ ಹೆಸರು ಉಲ್ಲೇಖಿಸಿ ದೂರು

ಫಾರ್ಮ್ 7 ದುರ್ಬಳಕೆ ಆರೋಪ

ಬೆಂಗಳೂರು: ಜಯನಗರ ಕ್ಷೇತ್ರದಲ್ಲಿ ಒಟ್ಟು 5698 ಫಾರ್ಮ್ 7 ಸಲ್ಲಿಕೆ ಶಂಕೆ ಹಿನ್ನೆಲೆ ಬಿಜೆಪಿ ಶಾಸಕನ ಹೆಸರು ಉಲ್ಲೇಖಿಸಿ ಸೌಮ್ಯಾ ರೆಡ್ಡಿ ದೂರು ನೀಡಿದ್ದಾರೆ. ಬೆಂಗಳೂರಿನ ಜಯನಗರ ಕ್ಷೇತ್ರದಲ್ಲಿ ಒಟ್ಟು 5698 ಫಾರ್ಮ್ 7 ಸಲ್ಲಿಕೆ ಶಂಕೆ ಹಿನ್ನೆಲೆ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಬಿಜೆಪಿ ಶಾಸಕ ಸಿ.ಕೆ. ರಾಮಮೂರ್ತಿ ಹೆಸರು ಉಲ್ಲೇಖಿಸಿ ದೂರು ನೀಡಿದ್ದು, ಅಕ್ರಮ ಎಸಗಿರುವ ಬಗ್ಗೆ ವಿಡಿಯೋ, ಫೋಟೋ ಸಾಕ್ಷ್ಯಗಳನ್ನೂ ನೀಡಿದ್ದಾರೆ. ಹಾಗಾಗಿ ದಾಖಲೆ ಪರಿಶೀಲಿಸಿ ಕಾನೂನು ಕ್ರಮಕ್ಕೆ ಪೊಲೀಸರಿಗೆ ಮನವಿ ಮಾಡಿದ್ದಾರೆ.

20 ಕೋಟಿ ರು.ಮೌಲ್ಯದ ಮಾದಕ ಜಪ್ತಿ

ಬೆಂಗಳೂರು: ವಿವಿಧ ಆಗ್ನೇಯ ಏಷ್ಯಾ ದೇಶಗಳಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ನಗರಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಸುಮಾರು 20 ಕೋಟಿ ರು.ಮೌಲ್ಯದ ಭಾರಿ ಪ್ರಮಾಣದ ಮಾದಕ ವಸ್ತುಗಳನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಬ್ಯಾಂಕಾಕ್, ವಿಯೆಟ್ನಾಂ, ಮಲೇಷಿಯಾ ಹಾಗೂ ಥೈಲ್ಯಾಂಡ್ ದೇಶಗಳಿಂದ ವಿಮಾನದ ಮೂಲಕ ಪ್ರಯಾಣಿಕರ ಲಗೇಜ್‌ಗಳಲ್ಲಿ ಬಾಕ್ಸ್ ಮಾಡಿ ಕದ್ದುಮುಚ್ಚಿ ತರಲಾಗುತ್ತಿದ್ದ ಬರೋಬ್ಬರಿ 57 ಕೆ.ಜಿಗೂ ಹೆಚ್ಚು ತೂಕದ ಹೈಡ್ರೋಪೋನಿಕ್ ಗಾಂಜಾ ಹಾಗೂ ಇತರ ನಿಷೇಧಿತ ಡ್ರಗ್ಸ್ ಅನ್ನು ಜಪ್ತಿ ಮಾಡಲಾಗಿದೆ. ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಲಗೇಜ್ ತಪಾಸಣೆ ನಡೆಸುವಾಗ ಹಾಗೂ ಅನುಮಾನಾಸ್ಪದ ಚಲನವಲನಗಳ ಆಧಾರದ ಮೇಲೆ ಪ್ರತ್ಯೇಕ ಕಾರ್ಯಾಚರಣೆ ನಡೆಸಿದ ಕಸ್ಟಮ್ಸ್ ಅಧಿಕಾರಿಗಳು, ಈ ಅಂತಾರಾಷ್ಟ್ರೀಯ ಡ್ರಗ್ಸ್ ಜಾಲಕ್ಕೆ ಸಂಬಂಧಿಸಿದಂತೆ ಒಟ್ಟು 9 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಮಾಫಿ ಸಾಕ್ಷಿ ಹೇಳಿಕೆ ಮುಕ್ತಾಯ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಾಸಿಕ್ಯೂಷನ್ ವಿಟ್ನೆಸ್, ಪ್ರದೋಷ್ ಮಾಫಿ ಸಾಕ್ಷಿ ಹೇಳಿಕೆ ಮುಕ್ತಾಯವಾಗಿದೆ. ಒಟ್ಟಾರೆಯಾಗಿ ನಾಲ್ಕು ದಿನಗಳ ಕಾಲ ನಡೆದ ಮಾಫಿ ಸಾಕ್ಷಿ ಹೇಳಿಕೆ ಸೋಮವಾರ ಅಂತ್ಯಗೊಂಡಿದ್ದು, ಮಂಗಳವಾರ ಡಾಕ್ಯುಮೆಂಟ್ ಮಾರ್ಕಿಂಗ್ ಪ್ರಕ್ರಿಯೆ ನಡೆಯಲಿದೆ. 59ನೇ ಸಿಸಿಹೆಚ್ ಕೋರ್ಟ್ ಮುಂದೆ ಹಾಜರಾಗಿ ದರ್ಶನ್ ಅಂಡ್ ಗ್ಯಾಂಗ್ ಕ್ರೌರ್ಯ ಬಿಚ್ಚಿಟ್ಟಿದ್ದ ಪ್ರದೋಷ್ನ ಹೇಳಿಕೆಯನ್ನ ನ್ಯಾಯಾಲಯ ಸಂಪೂರ್ಣವಾಗಿ ದಾಖಲು ಮಾಡಿದೆ. ಪ್ರಾಸಿಕ್ಯೂಷನ್‌ಗೆ ಅನುಗುಣವಾಗಿ ಪ್ರದೋಷ್ ಹೇಳಿಕೆ ದಾಖಲಿಸಿದ್ದು, ಇತ್ತ ದರ್ಶನ್ ಪರ ವಕೀಲರು ಕ್ರಾಸ್ ಎಕ್ಸಾಮಿನೇಷನ್ ಸಂಬಂಧ ಸಲ್ಲಿಸಿದ್ದ ಅರ್ಜಿಯ ಆದೇಶ ಮಂಗಳವಾರಕ್ಕೆ ಮುಂದೂಡಿಕೆಯಾಗಿದೆ.